ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರಃ 65/2016
ಚಾಸಾಃ4 ಪ್ರಾಸಾಃ3

ದಿನಾಂಕಃ 09.02.2023

| | | |
|---|---|---|
| ವಾಗ್ಮೂಲದವರ ಹೆಸರು | : | **ಶ್ರೀ ಸುರೇಶ್** |
| ತಂದೆಯ ಹೆಸರು | : | ಮಾಸ್ತಿ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ರಿಜರ್ವ್ ಪೋಲೀಸ್ |
| ವಾಸ ಸ್ಥಳ | : | ಮಂಗಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ಚಾಸಾ-1 ನನ್ನ ತಂಗಿ. ಚಾಸಾ-2 ನನ್ನ ತಾಯಿ. ಚಾಸಾ-3 ನನ್ನ ತಂದೆ. 1 ನೇ ಆರೋಪಿ ನನ್ನ ತಂಗಿಯ ಗಂಡ. 2 ನೇ ಆರೋಪಿ 1 ನೇ ಆರೋಪಿಯ ಅಕ್ಕ. 2012 ರಲ್ಲಿ ತ್ರಾಸಿಯ ಅಣ್ಣಪ್ಪಯ್ಯ ಸಭಾಭವನದಲ್ಲಿ ಚಾಸಾ-1 ಮತ್ತು 1 ನೇ ಆರೋಪಿಯ ಮದುವೆ ಆಗಿರುತ್ತದೆ.

ಮದುವೆ ಮೊದಲು ಮಾತುಕತೆಗೆ ಬಂದಿದ್ದಾಗ ಆರೋಪಿತರು ವರದಕ್ಷಿಣೆ ಕೇಳಿದ್ದು ಮದುವೆ ಮೊದಲು 45,000/- ನಗದು ಹಣವನ್ನು ಆರೋಪಿತರಿಗೆ ಕೊಟ್ಟಿದ್ದು, 35,000/- ಮತ್ತು 50,000/- ಹಣಕ್ಕೆ 2 ಚೆಕ್ ನ್ನು ಮದುವೆ 2 ದಿನದ ಮೊದಲು ಕೊಟ್ಟಿರುತ್ತೇನೆ ಮತ್ತು ಮದುವೆ ಸಮಯದಲ್ಲಿ 8 ಪವನ್ ಚಿನ್ನವನ್ನು ಹಾಕಿರುತ್ತೇನೆ. ಮದುವೆ ನಂತರ ಚಾಸಾ-1 ರವರನ್ನು ಗಂಡನ ಮನೆಗೆ ಕರೆದುಕೊಂಡು ಹೋಗಿದ್ದು ಸ್ವಲ್ಪ ದಿನ ಚೆನ್ನಾಗಿದ್ದರು. ಚಾಸಾ-1 ರವರವರಿಗೆ ಹೆಣ್ಣು ಮಗು ಜನಿಸಿದ ನಂತರ ಆರೋಪಿತರು ಕಿರುಕುಳ ಆರಂಭಿಸಿರುತ್ತಾರೆ.

ಚಾಸಾ-1 ರವರು ನನಗೆ ಫೋನ್ ಮಾಡಿ ಆರೋಪಿತರು ನನಗೆ ಹೊಡೆಯುತ್ತಾರೆ, ಮನೆಗೆ ಹೋಗು ಎಂದು ಬೈಯುತ್ತಿದ್ದಾರೆ ಎಂದು ಹೇಳುತ್ತಿದ್ದಳು, ಚಾಸಾ-1 ರವರು ಹೆರಿಗೆ ನಂತರ ಸ್ವಲ್ಪ ತಿಂಗಳು ನಮ್ಮ ಮನೆಯಲ್ಲಿದ್ದು ನಂತರ ಆರೋಪಿತರ ಮನೆಗೆ

ಹೋಗಿದ್ದು, 2-3 ತಿಂಗಳ ನಂತರ ನಮ್ಮ ಮನೆಗೆ ಬಂದಿರುತ್ತಾರೆ. ಈ ಬಗ್ಗೆ ಪೋಲೀಸರು ನನ್ನ ಹೇಳಿಕೆ ಪಡೆದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ಆರೋಪಿತರು ಚಾಸಾ-1 ರವರಿಗೆ ಹೆಣ್ಣು ಮಗು ಜನಿಸಿದೆ ಎಂದು ಮೂದಲಿಸಿ, ನಮ್ಮ ಮನೆಯಲ್ಲಿ ಬಾಳ್ವೆ ನಡೆಸಬೇಕಾದರೆ ನಿನ್ನ ತವರು ಮನೆಯಿಂದ 2,00,000/- ಲಕ್ಷ ಹಣವನ್ನು ವರದಕ್ಷಿಣೆಯಾಗಿ ತೆಗೆದುಕೊಂಡು ಬಾ ಎಂದು ಮಾನಸಿಕ ಕಿರುಕುಳ ನೀಡಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿ.

ದಿನಾಂಕ 15-01-2013 ರಂದು ಸಂಜೆ 4-00 ಗಂಟೆಗೆ ಚಾಸಾ-1 ಮತ್ತು ಅವರ ಮಗುವನ್ನು ಆರೋಪಿತರು ತವರು ಮನೆಗೆ ತಂದು ಬಿಟ್ಟಿದ್ದು 2,00,000/- ಹೆಚ್ಚು ವರದಕ್ಷಿಣೆ ತರದಿದ್ದಲ್ಲಿ ಕೊಲ್ಲುವುದಾಗಿ ಬೆದರಿಕೆ ಹಾಕಿರುತ್ತಾರೆ, ವರದಕ್ಷಿಣೆ ಹಣ ಕೊಡದಿದ್ದಲ್ಲಿ ನಿನ್ನ ಮಗುವಿನೊಂದಿಗೆ ನಿನ್ನ ತಾಯಿ ಮನೆಯಲ್ಲೇ ಇರಬೇಕು, ನಿನ್ನ ಗಂಡನನ್ನು ಕಳುಹಿಸುವುದಿಲ್ಲ ಮತ್ತು ಅವರೊಡನೇ ಬಾಳ್ವೆ ಮಾಡಲು ಬಿಡುವುದಿಲ್ಲ, ನೀನು ಸತ್ತರೂ ಕೂಡ ಬರುವುದಿಲ್ಲ, ಪೋಲೀಸ್ ಠಾಣೆಯಲ್ಲಿ ಕೇಸು ಮಾಡಿದರೇ ನಿನ್ನನ್ನು ಮತ್ತು ಮಗುವನ್ನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಕೆಲವು ದಿನದ ಬಳಿಕ ಮಗುವಿನೊಂದಿಗೆ ಗಂಡನ ಮನಗೆ ಹೋಗಿ ಅತ್ತು ಮಗುವಿನೊಂದಿಗೆ ಗಂಡನೊಂದಿಗೆ ಜೀವನ ನಡೆಸಲು ಅವಕಾಶ ನೀಡಲು ಬೇಡಿಕೊಂಡಿದ್ದು, ಆರೋಪಿತರು 2,00,000/- ಹಣ ತೆಗೆದುಕೊಂಡು ಬಾ ಎಂದು ಮನೆಯ ಒಳಗೆ ಬಿಡದೇ ವಾಪಾಸು ಕಳುಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಹೇಳಿಕೆಯ ಭಾಗವನ್ನು ನಿ.ಪಿ.4 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಮಾನ್ಯ ಆರೋಪಿ ಪರ ವಕೀಲರಾದ ಶ್ರೀ ಆರ್.ಕೆ.ಎಮ್.ರವರಿಂದಃ</u>**

ಮದುವೆಯ ಪ್ರಸ್ತಾಪವನ್ನು ಮದುವೆಯ ಒಂದೂವರೆ ತಿಂಗಳ ಮೊದಲು ಗೋಪಾಲ ಎಂಬರವರು ತಂದಿರುತ್ತಾರೆ. ವುದುವೆಯ ಮಾತುಕತೆಯನ್ನು ನನ್ನ ಚಿಕ್ಕಪ್ಪ ಸೂರ

ಎಂಬವರು ಮಾಡಿರುತ್ತಾರೆ. ವರದಕ್ಷಿಣೆಯನ್ನು ನನ್ನ ಚಿಕ್ಕಪ್ಪ ಸೂರ ರವರ ಮುಖಾಂತರ 2 ನೇ ಆರೋಪಿಗೆ ನಮ್ಮ ಮನೆಯಲ್ಲಿ ನೀಡಿರುತ್ತೇನೆ. ವರದಕ್ಷಿಣೆ ನೀಡಿದ ದಿನಾಂಕ ನೆನಪಿಲ್ಲ. ಹುಡುಗನ ಕಡೆಯಿಂದ 2 ನೇ ಆರೋಪಿಯ ತಂಗಿಯ ಗಂಡ ಮಾತುಕತೆ ಮಾಡಿದ್ದರು. ವರದಕ್ಷಿಣೆ ಕೊಡುವಾಗ ಪೋಟೋ ತೆಗೆದಿರುವುದಿಲ್ಲ. ಆರೋಪಿತರಿಗೆ ನಗದು ಹಣ ಕೊಟ್ಟಿರುವ ಬಗ್ಗೆ ಸಾಕ್ಷಿ ಇಲ್ಲ, ಚೆಕ್ಕು ಕೊಟ್ಟಿರುವ ಬಗ್ಗೆ ಸಾಕ್ಷಿ ಇದೆ. ಮದುವೆಗೆ ಸುಮಾರು 400-500 ಜನ ಬಂದಿದ್ದರು. ಮದುವೆಗೆ ಎಷ್ಟು ಖರ್ಚ್ ಆಗಿದೆ ಎಂದು ಸುಮಾರು 10 ವರ್ಷಗಳಾದ ಕಾರಣ ನೆನಪಿಲ್ಲ. ಮದುವೆಗೆ ಮೊದಲು 2 ಬಾರಿ ಮಾತುಕತೆ ಆಗಿರುತ್ತದೆ. ಆ ಸಮಯದಲ್ಲಿ 1 ನೇ ಆರೋಪಿ ಮುಂಬೈ ನಲ್ಲಿ ಮಾಡುತ್ತಿದ್ದರು.

ನಾನು 1999 ರಲ್ಲಿ ರಿರ್ಜವ್ ಪೋಲೀಸ್ ಆಗಿ ಕೆಲಸ ಮಾಡುತ್ತಿದ್ದೇನೆ. ಮದುವೆ ಮಾತುಕತೆ ಸಮಯದಲ್ಲಿ ಅದೇ ಉದ್ಯೋಗದಲ್ಲಿದ್ದೆ . ವರದಕ್ಷಿಣೆ ಕೊಡುವುದು ತಪ್ಪು ಎಂದು ನನಗೆ ಗೊತ್ತಿತ್ತು. ಮನೆಯಲ್ಲಿ ಕೊಟ್ಟ 45,000/- ಹಣ ನನ್ನದು ಆಗಿರುತ್ತದೆ. ಸದ್ರಿ ಹಣ ಕೊಟ್ಟಿರುವ ಬಗ್ಗೆ ದಾಖಲೆಯಲ್ಲಿ ಕಾಣಿಸಿಲ್ಲ. ಮದುವೆಯ ಖರ್ಚ್ ನ್ನು ಸ್ವ ಖುಷಿಯಿಂದ ಮಾಡಿರುತ್ತೇನೆ ಎಂದರೆ ಸರಿ. ಅಣ್ಣಪ್ಪಯ್ಯ ಸಭಾಭವನದಲ್ಲಿ ಮದುವೆ ಮಾಡಿದ ಬಗ್ಗೆ ರಶೀದಿಯನ್ನು ಪೋಲೀಸರಿಗೆ ನೀಡಿಲ್ಲ. ಮದುವೆಯ ಎಲ್ಲಾ ಖರ್ಚ್ ನ್ನು ಆರೋಪಿತರು ಮಾಡಿರುತ್ತಾರೆ ಎಂದರೆ ಸಾಕ್ಷಿಯು 50 ಭಾಗ ನಾನು ಖರ್ಚು ಮಾಡಿರುವುದಾಗಿ ನುಡಿದಿರುತ್ತಾರೆ. ನಾನು 2 ಚೆಕ್ಕುನ್ನು ಮದುವೆಯ ಖರ್ಚು ಬಾಬ್ತು ಆರೋಪಿತರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ರಿರ್ಜವ್ ಪೊಲೀಸ್ ಆದ ಕಾರಣ ವರದಕ್ಷಿಣೆ ಕೊಟ್ಟಿಲ್ಲ ಎಂದರೆ ಸರಿಯಲ. 2 ನೇ ಆರೋಪಿ ವರದಕ್ಷಿಣೆ ಕೇಳಿಲ್ಲ, ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ವರದಕ್ಷಿಣೆ ಕೇಳುವಾಗ ಹುಡುಗನ ಕಡೆ 5-6 ಜನ ಇದ್ದರು. ಆ ಜನರಲ್ಲಿ 2 ನೇ ಆರೋಪಿಯ ಇಬ್ಬರೂ ತಂಗಿಯರು ಮತ್ತು ಅವರ ಗಂಡಂದಿರು ಆಗಿರುತ್ತಾರೆ.

ನಂತರ ನಾನು ನನ್ನ ಕೆಲಸದಲ್ಲಿ ನಿರತನಾಗಿದ್ಧೆ ಚಾಸಾ-1 ತಮ್ಮ ಗಂಡನೊಂದಿಗೆ ಮುಂಬೈನಲ್ಲಿ ಇದ್ದರು ಎಂದರೆ ಸರಿ. 1 ನೇ ಆರೋಪಿ ಕಾಯಿಲೆಯಿಂದ ದೀರ್ಘ ಕಾಲ ಬಳಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ನನಗೆ ಕರೆ ಮಾಡಿ ಯಾವುದೇ ಕಿರುಕುಳದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕಾಯಿಲೆಯಿಂದ ಬಳಲುತ್ತಿದ್ದರಿಂದ ಅವರೊಂದಿಗೆ ವಾಸಿಸಲಾಗಾದೆ ಸ್ವತಃ ಚಾಸಾ-1 ರವರು ಅವರನ್ನು ಬಿಟ್ಟುಹೋಗಿರುತ್ತಾರೆ ಎಂದರೆ ಸರಿಯಲ್ಲ. ತಮ್ಮನಾದ 1 ನೇ ಆರೋಪಿಯನ್ನು ಉಳಿಸಿಕೊಳ್ಳಲು 2 ನೇ ಆರೋಪಿ ಲಕ್ಷಾಂತರ ರೂ. ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. 2 ನೇ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**